ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ
ಕಲೆ: ಮನೋಹರ ಕೆ. ಆಚಾರ್ಯ



## ನೇಪಾಳ ಸೈಕಲ್ ಯಾತ್ರೆಯ ನೆನಪಿನಲ್ಲಿ...

ನೇಪಾಳದ ಸೈಕಲ್ ಯಾತ್ರೆ ಮುಗಿಸಿ ಬಂದ ಭಾವೇಶ್ ಹಾಗೂ ಅವರ ಗೆಳೆಯರಿಗೆ ಬಹು ದೊಡ್ಡ ಸ್ವಾಗತ ಕಾದಿತ್ತು. ಲಯನ್ಸ್ ಕ್ಲಬ್, ಕಾಲೇಜಿನ ಎಲ್ಲ ಸಿಬ್ಬಂದಿ, ಎನ್.ಎಸ್.ಎಸ್. ಮತ್ತು ಎನ್.ಸಿ.ಸಿ.ಯ ಪದಾಧಿಕಾರಿಗಳು ಮತ್ತು ಬಲು ದೊಡ್ಡ ಸಂಖ್ಯೆಯಲ್ಲಿ ಬಂದಿದ್ದ ಪತ್ರಕಾರ ಮಿತ್ರರು ಎಲ್ಲರೂ ಇವರನ್ನು ಪ್ರಶಂಸೆ ಮಾಡಿದರು. ಭಾವೇಶ್ ಅವರಿಗೆ ತಾವು ಯಾವುದೋ ಯುದ್ಧವನ್ನು ಗೆದ್ದು ಬಂದಂತೆ ಅನಿಸಿದ್ದರೆ ಅಚ್ಚರಿಯಲ್ಲ. ಅಷ್ಟರಲ್ಲಿ ಸ್ಥಾನೀಯ ಪೊಲೀಸು ಠಾಣೆಯಿಂದ ಕರೆ ಬಂದಿತು. ಅಲ್ಲಿಗೆ ಹೋದಾಗ ಸಬ್ ಇನ್ಸ್‌ಪೆಕ್ಟರ್ ಅವರನ್ನು ಸತ್ಕರಿಸಿದರು. ಇಷ್ಟೆಲ್ಲ ಜಾಗಗಳಲ್ಲಿ ಜನರ ಪ್ರೀತಿ, ಆದರ, ಸತ್ಕಾರಗಳನ್ನು ಪಡೆಯುತ್ತಾ ಕಡೆಗೂ ಭಾವೇಶ್, ಮಯೂರ್ ಭಾಯಿಯವರ ಮನೆಗೆ ತಲುಪಿದಾಗ ರಾತ್ರಿಯಾಗಿತ್ತು. ಮನೆಗೆ ತಲುಪಿದ್ದೇ ತಡ, ಮೊದಲಿಗೆ ಬಾಂಬೆಗೆ ಫೋನ್ ಮಾಡಿ ತಂದೆ ತಾಯಿಯರೊಡನೆ ಮಾತನಾಡಿದರು.

ಈ ಸೈಕಲ್ ಯಾತ್ರೆಯ ಸಮಯದಲ್ಲಿ ಭಾವೇಶ್ ಅಪರೂಪಕ್ಕೆ ಅಮ್ಮನೊಡನೆ ಫೋನಿನಲ್ಲಿ ಮಾತನಾಡಿದ್ದರು. ಆಕೆ ಆತನಿಗೆ ಧೈರ್ಯ ಹೇಳಿ ಹುರಿದುಂಬಿಸಿದ್ದಳು. ಭಾವೇಶ್ ಹಾದಿಯ ಕಷ್ಟಗಳನ್ನು ಹೇಳಿಕೊಂಡಿದ್ದರು. ಆದರೆ ಆಕೆ ತನ್ನ ಕಷ್ಟಗಳ ಬಗ್ಗೆ ಒಂದಿಷ್ಟೂ ಹೇಳಿಕೊಂಡಿರಲಿಲ್ಲ. ಯಾತ್ರೆ ಪೂರ್ಣವಾದ ಈ ಹೊತ್ತು, ಅಮ್ಮ ತನ್ನೊಡಲ ನೋವನ್ನು ಮಗನೊಡನೆ ಹಂಚಿಕೊಂಡಳು. ಭಾವೇಶನ ಸೈಕಲ್ ಯಾತ್ರೆಯ ಅಷ್ಟೂ ಸಮಯ, ತಂದೆ ಮುಂಬಯಿಯ ಭಾಟಿಯಾ ಆಸ್ಪತ್ರೆಯಲ್ಲಿದ್ದರು. ಮಗನ ಸೈಕಲ್ ಯಾತ್ರೆಗೆ ಯಾವ ಬಾಧೆಯೂ ಆಗದಿರಲಿ ಎಂದು ತಾಯಿ ಮಗನಿಗೆ ಈ ವಿಚಾರವನ್ನು ಹೇಳಿಯೇ ಇರಲಿಲ್ಲ. ತಾನೊಬ್ಬಳೇ ಎಲ್ಲ ಕಷ್ಟವನ್ನು ಎದುರಿಸಿದ್ದಳು. ಈಗ ತಂದೆಯ ಆರೋಗ್ಯ ಸುಧಾರಿಸಿದ ಹೊತ್ತು, ಮಗನಿಗೆ ತಿಳಿಸಿ ಹೇಳಿದಳು.

ಗೋಂದಿಯಾಗೆ ಹಿಂತಿರುಗಿದ ಮರುದಿನ ಮತ್ತಷ್ಟು ಸಮಾರಂಭಗಳಿದ್ದವು. ಯಾತ್ರೆಗೆ ಸಹಾಯ ಮಾಡಿದ ಸಂಸ್ಥೆಗಳು ಇವರನ್ನು ಕರೆದು ಸತ್ಕರಿಸಲು ಬಯಸಿದ್ದವು. ಎಲ್ಲಿ ನೋಡಿದರೂ ಈ ಮೂವರು ಹುಡುಗರದೇ ಮಾತು, ಸತ್ಕಾರ. ಮತ್ತೆ ಈ ಯಾತ್ರೆಯ ವಿಶೇಷ ಆಕರ್ಷಣೆ ಭಾವೇಶ್ ಆಗಿದ್ದರು. ಓರ್ವ ಕುರುಡು ವ್ಯಕ್ತಿ ಇಷ್ಟು ಕಷ್ಟದ ಸುದೀರ್ಘ ಯಾತ್ರೆಯನ್ನು ಸೈಕಲ್‌ನಲ್ಲಿ ಮಾಡಿ ಬಂದದ್ದು ಎಲ್ಲರಿಗೂ ಅಚ್ಚರಿ. ಕಣ್ಣಿದ್ದವರೂ ಪಕ್ಕದ ಊರಿಗೂ ಹೋಗದಿರುವಾಗ, ಈ ಅಂಧ ಹುಡುಗ ಪಕ್ಕದ ದೇಶಕ್ಕೆ ಹೋಗಿ ಬಂದದ್ದು ಅದ್ಭುತವಿತ್ತು. ಆದರೆ ಭಾವೇಶ್‌ಗೆ ಇದು ಓರ್ವ ಸಾಧಾರಣ ವ್ಯಕ್ತಿಗೆ ಎಷ್ಟು ಕಷ್ಟವೋ ಅಷ್ಟೇ ತನಗೂ ಆಗಿದ್ದು ಅನಿಸಿತ್ತು. ಕಾರಣ ಅವರ ತಾಯಿ ಬಾಲ್ಯದಿಂದಲೂ ಭಾವೇಶ್ ಅವರನ್ನು ಸಾಧಾರಣ ವ್ಯಕ್ತಿಯಂತೆಯೇ ಬೆಳೆಸಿದ್ದರು. ಅಂಧನೆಂಬ ಅನುಕಂಪದಲ್ಲಿ ಆತಂಕದಲ್ಲಿ ವಿಶೇಷ ರಿಯಾಯಿತಿಗಳನ್ನು ಬಯಸಿ, ತನ್ನಂತಹ ಅಂಧರ, ದಿವ್ಯಾಂಗರ ಗುಂಪಿನಲ್ಲಿ ಸುರಕ್ಷಿತವಾಗಿ ಸಂರಕ್ಷಿಸಲು ಬಯಸಿರಲಿಲ್ಲ. ಆತನನ್ನು ಜಗತ್ತಿನ ಎಲ್ಲ ಸವಾಲಿಗೂ ಒಡ್ಡಿದ್ದರು. ಈ ಕಾರಣಕ್ಕೇ ಬಹುಶಃ ಭಾವೇಶ್‌ಗೆ ತನ್ನ ಕುರುಡುತನ ಸೈಕಲ್ ಸಾಹಸಕ್ಕೆ ಯಾವ ರೀತಿಯಲ್ಲೂ ಅಡ್ಡಿಯಾಗಲಿಲ್ಲ ಅನಿಸಿತ್ತು. ಅವರಿಗೆ ಅರಿವಿತ್ತು, ಇತರರಂತೆ ತಾನು ಜಗತ್ತನ್ನು ಎಂದಿಗೂ ನೋಡಲಾರೆ ಎನ್ನುವುದು. ಅದು ಅವರ ಬದುಕಿನ ನಿತ್ಯಸತ್ಯವಾಗಿತ್ತು. ಬಹಳಷ್ಟು ವೈದ್ಯರಲ್ಲಿಗೆ ಹೋಗಿ ನಿರಾಶರಾಗಿದ್ದ ಅನುಭವ ಹಿಂದಿತ್ತು. ಆದರೆ ಬದಲಾಯಿಸಲು ಸಾಧ್ಯವಿಲ್ಲದ್ದನ್ನು ಸ್ವೀಕರಿಸಿದ ಮೇಲೆ, ಅದೊಂದು ಸಮಸ್ಯೆಯಾಗಿ ಉಳಿದಿರಲಿಲ್ಲ.

ಸಣ್ಣಪುಟ್ಟ ಕಿರಿಕಿರಿಗಳನ್ನು ದೊಡ್ಡದು ಮಾಡದೆ, ಅವುಗಳನ್ನು ಉಪೇಕ್ಷಿಸಿದೊಡನೆ ಸಮಸ್ಯೆಗಳಿಂದ ಮುಕ್ತಿ ಸಿಗುವುದನ್ನೂ ಭಾವೇಶ್ ಕಂಡಿದ್ದರು. ಅಮ್ಮ ಹೇಳಿದ್ದರು